ವಾರದ ಪತ್ರ

## ತಪ್ಪು ತಿಳಿವಳಿಕೆ ಬಿತ್ತುವುದು ಸರಿಯಲ್ಲ

ವಾಹಿನಿಯೊಂದರಲ್ಲಿ ಒಂದು ಜಾಹೀರಾತು ಕಣ್ಣಿಗೆ ಬಿತ್ತು. ಅದು ಆಹಾರ ಉತ್ಪನ್ನಕ್ಕೆ ಸಂಬಂಧಿಸಿದ್ದಾಗಿತ್ತು. ಅದರಲ್ಲಿ ಚಿಕ್ಕ ಬಾಲಕನೊಬ್ಬ ತಿನಿಸನ್ನು ತಿನ್ನುವಾಗ, ಅವನ ಹತ್ತಿರವೇ ನಾಯಿಯೂ ಇತ್ತು. ತಿನ್ನುವ ಪದಾರ್ಥದಲ್ಲಿ ನಾಯಿಯ ಕೂದಲು ಬೀಳಬಹುದಾದ ಸಾಧ್ಯತೆ ಹೆಚ್ಚಿರುತ್ತದೆ. ಈ ಬಗ್ಗೆ ಜಾಹೀರಾತಿನಲ್ಲಿ ಜಾಗೃತಿಯ ಅಗತ್ಯ ಇದೆ. ಅದರಲ್ಲಿ ಆ ಸೂಕ್ಷ್ಮ ವಿಷಯವನ್ನು ಹೇಳುವ ಪ್ರಯತ್ನ ಮಾಡಿಲ್ಲ. ಮಕ್ಕಳು ಉಣ್ಣುವಾಗ ತಿನ್ನುವಾಗ ನಾಯಿಯಿಂದ ದೂರ ಇರಬೇಕು ಎನ್ನುವುದು ಸಾಮಾನ್ಯ ತಿಳಿವಳಿಕೆ. ಜಾಹೀರಾತಿನಂತೆ ನಾಯಿಯೊಟ್ಟಿಗೆ ಸಹಭೋಜನ ಮಾಡಿದರೆ ಆರೋಗ್ಯದ ಮೇಲೆ ತೊಂದರೆ ಆಗಬಹುದು. ಇಂತಹ ಜಾಹೀರಾತುಗಳಿಗೆ ಕಡಿವಾಣ ಅಗತ್ಯ.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ಮಕ್ಕಳನ್ನು ವಿಕೃತರನ್ನಾಗಿ ಚಿತ್ರಿಸಬಹುದೆ?

ಸ್ಟಾರ್ ಸುವರ್ಣ ವಾಹಿನಿಯ 'ನಮ್ಮ ಲಚ್ಚಿ' ಧಾರಾವಾಹಿಯಲ್ಲಿ, ಪುಟ್ಟ ಹುಡುಗಿಯೊಬ್ಬಳು ಮತ್ತೊಬ್ಬ ಹುಡುಗಿಯನ್ನು ಹುತ್ತಕ್ಕೆ ಕೈ ಹಾಕುವಂತೆ ಮಾಡುತ್ತಾಳೆ. ಇಂತಹ ದೃಶ್ಯಗಳ ಮೂಲಕ ನೋಡುಗರಿಗೆ ಏನನ್ನು ಹೇಳಲಾಗುತ್ತಿದೆ? ನೀಚ ಬುದ್ಧಿಯ ವಿಕೃತ ಕುತಂತ್ರಕ್ಕೆ ಮಕ್ಕಳನ್ನು ಬಳಸಿಕೊಳ್ಳುವುದು ಸರಿಯೆ? ಚಿಕ್ಕಮಕ್ಕಳ ಪರಿಸರದಲ್ಲಿ ಇಂತಹ ಸನ್ನಿವೇಶವನ್ನು ಸೃಷ್ಟಿಸುವುದು ಎಷ್ಟು ಸರಿ?

ಧಾರಾವಾಹಿ ನಿರ್ಮಾಣಕ್ಕೆ ಸಂಬಂಧಿಸಿದಂತೆ ಎಷ್ಟೇ ಕಟುವಿಮರ್ಶೆಗಳು ಎದುರಾದರೂ ವಿರೂಪ ಚಿತ್ರಣಕ್ಕೆ ಕೊನೆ ಇದ್ದಂತಿಲ್ಲ. ನಮ್ಮ ನೆಮ್ಮದಿಗೆ ಭಂಗವಿಲ್ಲ ಎನ್ನುವ ಮನಸ್ಥಿತಿಗೆ ಧಾರಾವಾಹಿ ನಿರ್ಮಾಪಕರು ತಲುಪಿರುವಂತಿದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಜನಪದ-ಭಾವ ಗೀತೆಯೂ ಇರಲಿ




ಸ್ಟಾರ್ ಸುವರ್ಣದ 'ಸುವರ್ಣ ಸೂಪರ್ ಸ್ಟಾರ್'ನ ಸ್ಪರ್ಧಿಗಳಿಗೆ ಒಂದು ಪರೀಕ್ಷೆಯನ್ನು ಒಡ್ಡಲಾಯಿತು. ಹಿನ್ನೆಲೆ ಗಾಯಕ ಅನಿರುದ್ಧ ಶಾಸ್ತ್ರಿ ಸಿನಿಮಾ ಹಾಡುಗಳ ಚರಣಗಳನ್ನು ಹಾಡಿದರು. ಸ್ಪರ್ಧಿಗಳು ಆ ಹಾಡಿನ ಪಲ್ಲವಿಯನ್ನು ಹೇಳಬೇಕು. ಅವರು ಆಯ್ಕೆ ಮಾಡಿಕೊಂಡ ಹಾಡುಗಳಲ್ಲಿ ಕನ್ನಡ ಕವಿಗಳ ಭಾವಪೂರ್ಣ ಗೀತೆಗಳು ಮತ್ತು ಜನಪದರ ಹಾಡುಗಳೂ ಇದ್ದಿದ್ದರೆ ಕಾರ್ಯಕ್ರಮ ಮತ್ತಷ್ಟು ಕಳೆಗಟ್ಟುತ್ತಿತ್ತು.

—ಸಿಹಿಮೊಗೆ ರಮೇಶ್, ಮೈಸೂರು

## ಸಮಗ್ರ ಸುದ್ದಿಗೆ ಗ್ರಹಣ

ಸುದ್ದಿ ವಾಹಿನಿಗಳು ಸಾಮಾನ್ಯವಾಗಿ ನಾಡು, ಗಡಿ, ದೇಶ ವಿದೇಶದ ಸಮಗ್ರ ಸುದ್ದಿಗಳನ್ನು ನಿಗದಿತ ಸಮಯದ ಮಿತಿಯಲ್ಲಿ ನೀಡಲು ಪ್ರಯತ್ನಿಸುತ್ತವೆ. ಕನ್ನಡದ ಸುದ್ದಿ ವಾಹಿನಿಗಳನ್ನು ನೋಡಿದಾಗ ಆ ಉದ್ದೇಶ ಸಮರ್ಪಕವಾಗಿ ಈಡೇರಿಲ್ಲ ಎಂದೆನಿಸುತ್ತದೆ.

ಕನ್ನಡ ಸುದ್ದಿ ವಾಹಿನಿಗಳು ಪಕ್ಷ ರಾಜಕೀಯ ಮತ್ತು ಸಿನಿಮಾ ತಾರೆಯರ ವೈಯಕ್ತಿಕ ಬದುಕಿಗೆ ಹೆಚ್ಚಿನ ಆದ್ಯತೆ ನೀಡುತ್ತವೆ. ಅಭಿವೃದ್ಧಿ, ನಾಗರಿಕರ ಸಮಸ್ಯೆ, ಆರೋಗ್ಯ, ಶೈಕ್ಷಣಿಕ ವಿಷಯಗಳಂತೂ ತುಂಬ ಕಡಿಮೆ ಆಗಿವೆ. ಕ್ರೀಡೆ, ಹವಾಮಾನ ಮತ್ತು ಷೇರುಪೇಟೆ ವಿವರಗಳೂ ಇಳಿಮುಖವಾಗಿದೆ. ಆಯಾ ದಿನದ ಒಂದೆರಡು ಮಹತ್ವದ ರಾಜಕೀಯ ಬೆಳವಣಿಗೆಯನ್ನು ಇಟ್ಟುಕೊಂಡು ತಲೆ ಚಿಟ್ಟು ಹಿಡಿಯುವಷ್ಟು ಕೊರೆಯುತ್ತಾರೆ. ಇತ್ತೀಚೆಗೆ ಸರ್ಕಾರದ 'ಗ್ಯಾರಂಟಿ' ಬಗೆಗಿನ ವಿಮರ್ಶೆ—ವಿಶ್ಲೇಷಣೆ ವೀಕ್ಷಕರಿಗೆ ವಾಕರಿಕೆ ತರಿಸಿವೆ. ಹೆಚ್ಚಿನ ವಾಹಿನಿಗಳ ಸುದ್ದಿ ಬೆಂಗಳೂರು ಕೇಂದ್ರೀಕೃತವಾಗಿರುತ್ತದೆ.

—ರಮಾನಂದ ಶರ್ಮಾ, ಬೆಂಗಳೂರು

## ಚಿತ್ತ ಚಾಂಚಲ್ಯದ ಗೊಂದಲದ ಅತ್ತೆ

ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮಿ'ಯಲ್ಲಿ ಕುಸುಮತ್ತೆ ಪಾತ್ರ ತೀರಾ ಗೊಂದಲದಿಂದ ಕೂಡಿದೆ ಎಂದು ಇತ್ತೀಚೆಗೆ ಅನ್ನಿಸುತ್ತಿದೆ. ಒಮ್ಮೆ ತನ್ನ ಸೊಸೆಯನ್ನು ಬಂಗಾರ ಎಂದೂ ಹೊಗಳುವ, ಮೊಗದೊಮ್ಮೆ ಎಲ್ಲರ ಮುಂದೆ ಹೀಯಾಳಿಸುವ ಈ ಅತ್ತೆಯ ಪಾತ್ರ ಯಾಕೋ ಹಿತ ಅನಿಸುವುದಿಲ್ಲ.

—ಜಯಶ್ರೀ, ಬೆಂಗಳೂರು

## ರಿಯಾಲಿಟಿ ಶೋಗಳಿಗೆ ನಿಯಂತ್ರಣ ಬೇಕು



ಕಲರ್ಸ್ ಕನ್ನಡ ವಾಹಿನಿಯಲ್ಲಿ 'ಫ್ಯಾಮಿಲಿ ಗ್ಯಾಂಗ್ ಸ್ಟರ್ಸ್' ಎಂಬ ರಿಯಾಲಿಟಿ ಶೋ ಪ್ರಸಾರವಾಗುತ್ತಿದೆ. ಅದರಲ್ಲಿ ಕನ್ನಡ ಶೀರ್ಷಿಕೆ ಇಲ್ಲ. ಇಂತಹ ಕಾರ್ಯಕ್ರಮಗಳಿಗೆ ಯಾವುದೇ ಕಟ್ಟುಪಾಡು ಇದ್ದಂತಿಲ್ಲ. ಟೀವಿ ಕಾರ್ಯಕ್ರಮಗಳಿಗೆ ನೀತಿಸಂಹಿತೆ ಬೇಕಾಗುತ್ತದೆ. ಇವರು ತೋರಿಸುವ ಸಾಹಸಗಳನ್ನು ಸರಿಯಾದ ಮಾರ್ಗದರ್ಶನ ಇಲ್ಲದೆ ಯಾರೂ ಪ್ರಯತ್ನಿಸಬಾರದು ಎಂಬ ಎಚ್ಚರಿಕೆ ಕೂಡ ಅಗತ್ಯ. ಎಲ್ಲ ರಿಯಾಲಿಟಿ ಶೋಗಳೂ ಸ್ವಯಂ ನಿಯಂತ್ರಣವನ್ನು ರೂಪಿಸಿಕೊಳ್ಳುವುದು ಅಗತ್ಯ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಭೋಟಾ ಚಾಂಪಿಯನ್: ಬದಲಾವಣೆ ಬೇಕು

ಝೀ ಕನ್ನಡದ 'ಭೋಟಾ ಚಾಂಪಿಯನ್' ಕಾರ್ಯಕ್ರಮವನ್ನು ತಪ್ಪದೇ ನೋಡುತ್ತೇನೆ. ಪುಟ್ಟ ಮಕ್ಕಳ ಮಾತು ಕೇಳಲು ಖುಷಿಯಾಗುತ್ತದೆ. ಆಟದ ಮನೆಯಲ್ಲಿ ಆಟದ ಸಾಮಾನು, ಅಡುಗೆ ಪದಾರ್ಥಗಳನ್ನು ಇಟ್ಟಿರುತ್ತಾರೆ. ಮಕ್ಕಳಿಗೆ ಅವುಗಳ ಪರಿಚಯವಾದಂತಾಗುತ್ತದೆ. ಅಡುಗೆ ಸಾಮಾನುಗಳನ್ನು ಎತ್ತರದ ಸ್ಥಳದಲ್ಲಿ ಇಟ್ಟಿರುತ್ತಾರೆ. ಹಾಗಾಗಿ ಕಣ್ಣಿಗೂ ಕಾಣುವುದಿಲ್ಲ. ಕೈಗೂ ಎಟುಕುವುದಿಲ್ಲ. ಆಟದ ಮನೆಯಲ್ಲಿ ಸಂಗೀತ ನಿರ್ದೇಶಕರು, ಹಿನ್ನೆಲೆ ಗಾಯಕರ ಫೋಟೊವನ್ನು ಇಟ್ಟಿರುವುದಿಲ್ಲ. ಪ್ರತಿಯೊಬ್ಬರಿಗೂ ಪರಿಚಯ ಬೇಕಲ್ಲವೇ? ಈ ಕಾರ್ಯಕ್ರಮದಲ್ಲಿ ಶ್ವೇತಕ್ಕ ಸ್ಪರ್ಧಿಗಳನ್ನು ಬಹುವಚನದಲ್ಲಿ ನಾಟಕೀಯವಾಗಿ ಮಾತನಾಡಿಸುತ್ತಾರೆ. ಕುರಿ ಪ್ರತಾಪ್ ಅವರ ನಟನೆ ಒಮ್ಮೊಮ್ಮೆ ಅತಿರೇಕವೆನಿಸುತ್ತದೆ. ಇದರಲ್ಲಿ ಬದಲಾವಣೆಯನ್ನು ತಂದರೆ ಒಳ್ಳೆಯದು.

—ಎಂ.ಎಸ್. ಇಂಚರ ದತ್, (10ನೇ ತರಗತಿ ವಿದ್ಯಾರ್ಥಿ) ಬೆಂಗಳೂರು